**ಸಿಸಿ ಸಂಖ್ಯೆ: -1577/2019** **ಡಿ.ಡಬ್ಲ್ಯೂ.:-2**

ದಿನಾಂಕಃ **03-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ :-

ಆರೋಪಿಯು ದಿಃ 03-09-2019 ರಂದು ಬೆಳಗುತ್ತಿ ಶಾಖೆಯ ಬ್ಯಾಂಕ್ ಗೆ ಚಕ್ ನಂ.182312 ಮತ್ತು 182313 ಚಕ್ಕುಗಳು ಕಳುವಾಗಿದ್ದು ಸದರಿ ಚಕ್ಕುಗಳನ್ನು ತಡೆಹಿಡಿಯುವಂತೆ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ನಿಪಿ-1 ರ ಚಕ್ಕು ಕಳುವಾದ ಬಗ್ಗೆ ನಮೂದಾಗಿದೆ ಎಂದರೆ ಸರಿ. ಸಾಮಾನ್ಯವಾಗಿ ಚಕ್ಕು ಕಳೆದುಹೋದ ಬಗ್ಗೆ ಮತ್ತು ಅದನ್ನು ತಡೆಹಿಡಿಯುವ ಬಗ್ಗೆ ಅರ್ಜಿಯನ್ನು ಬ್ಯಾಂಕ್ ಗೆ ಸಲ್ಲಿಸಿದಾಗ ನಂತರ ಚಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ Stop Payment ಎಂದು ಹಿಂಬರಹವನ್ನು ಕೊಡುತ್ತೇವೆ ಎಂದರೆ ಸರಿ. ಖಾತೆದಾರನು ನಿಡಿ-2 ಅರ್ಜಿಯನ್ನು ಸಲ್ಲಿಸಿದ ನಂತರ ಬೆಳಗುತ್ತಿ ಶಾಖೆಯವರು ಸಿಸ್ಟಂ ನಲ್ಲಿ ಎಂಟ್ರಿ ಮಾಡಿದ ಮೇಲೆ ಸದರಿ ಚಕ್ಕು ಬೇರೊಂದು ಬ್ಯಾಂಕ್ ಗೆ ನಗದೀಕರಣಕ್ಕೆ ಬಂದಾಗ ನಗದೀಕರಣ ಮಾಡುವ ಪೂರ್ವದಲ್ಲಿ ಸಿಸ್ಟಂ ನಲ್ಲಿ ಬೆಳಗುತ್ತಿ ಶಾಖೆಯವರು ಎಂಟ್ರಿ ಮಾಡಿರುತ್ತಾರೆ. ಅದು ನಮಗೆ ಕಾಣಲಿಲ್ಲದ ಕಾರಣ ನಾವು ಸಾಕಷ್ಟು ಹಣ ಇಲ್ಲ ಎಂದು ಹಿಂಬರಹವನ್ನು ಕೊಟ್ಟಿರುತ್ತೇವೆ. ನಿಡಿ-2 ಅರ್ಜಿಯನ್ನು ಸಲ್ಲಿಸಿದ ಸಮಯದಲ್ಲಿ ಬ್ಯಾಂಕ್ ನವರು ಎಂಟ್ರಿ ಮಾಡಿದ್ದಾರೆ ಆದರೆ ಕೆಲವೊಂದು ಬಾರಿ ಅದು visible ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ-2 ಅರ್ಜಿಯನ್ನು ದಿಃ 03-09-2019 ರಂದು ಖಾತೆದಾರರು ಸಲ್ಲಿಸಿದ್ದು ತದನಂತರ ಚಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ Stop Payment ಎಂದು ಹಿಂಬರಹವನ್ನು ಕೊಡಬೇಕೆಂದರೆ ಸರಿ. ಆದರೆ ನಿಪಿ-1 ಚಕ್ಕನ್ನು ನಗದೀಕರಣಕ್ಕೆ ಸಲ್ಲಿಸಿದಾಗ Stop Payment ಬದಲಾಗಿ Insufficient Fund ಎಂದು ಹಿಂಬರವನ್ನು ಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸಿಸ್ಟಂ ಅಲ್ಲಿ ಸರಿಯಾಗಿ ಕಾಣಿಸದಿದ್ದ ಕಾರಣ Insufficient

Fund ಎಂದು ಹಿಂಬರವನ್ನು ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಚಕ್ಕನ್ನು ತಡೆಹಿಡಿಯುವಂತೆ ಖಾತೆದಾರರು ಅರ್ಜಿಯನ್ನು ಸಲ್ಲಿಸಿದಾಗ ಬ್ಯಾಂಕ್ ನವರು ಅದನ್ನು ಸಿಸ್ಟಂ ನಲ್ಲಿ ಅಪ್ಡೇಟ್ ಮಾಡಬೇಕು ಎಂದರೆ ಸರಿ. ಸಾಮಾನ್ಯವಾಗಿ ಚಕ್ಕುಗಳನ್ನು ತಡೆಹಿಡಿಯುವಂತೆ ಅರ್ಜಿಯನ್ನು ಸಲ್ಲಿಸಿದಾಗ ಸದರಿ ಅರ್ಜಿಗಳನ್ನು ಬ್ಯಾಂಕ್ ನ ಒಂದು ರಿಜಿಸ್ಟರ್ ನಲ್ಲಿ ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಡಿ-2 ಅರ್ಜಿಯನ್ನು ಖಾತೆದಾರರು ಸಲ್ಲಿಸಿದ್ದಾರೆ ಎಂದರೆ ಸರಿ. ನಿಡಿ-2 ರಲ್ಲಿ ಖಾತೆದಾರರ ಸಹಿ ಸಿದ್ದನಗೌಡ ಎಂದು, ನಿಪಿ-1 ರಲ್ಲಿ ಸಿದ್ದಪ್ಪ ಎಂದು ನಮೂದಾಗಿದೆ ಎಂದರೆ ಸರಿ. ನಿಡಿ-2 ಅರ್ಜಿಯನ್ನು ಸಲ್ಲಿದಾಗ ಬೆಳಗುತ್ತಿ ಶಾಖೆಯವರು ರಿಜಿಸ್ಟರ್ ನಲ್ಲಿ ನಮೂದು ಮಾಡಿರುತ್ತಾರೆ.

<u>ಪಾಟೀ ಸವಾಲುಃ ಫಿರ್ಯಾಧಿಪರ ವಕೀಲರಿಂದಃ</u>

ನಿಡಿ-2 ರಲ್ಲಿ ಬ್ಯಾಂಕ್ ನವರು ಯಾವ ದಿನಾಂಕದಂದು ಅರ್ಜಿಯನ್ನು ಸ್ವೀಕರಿಸಿದ ಬಗ್ಗೆ ದಿನಾಂಕ ಸರಿಯಾಗಿ ಕಾಣಿಸುತ್ತಿಲ್ಲ, ಬ್ಯಾಂಕ್ ನಲ್ಲಿರುವ ರಿಜಿಸ್ಟರ್ ನೋಡಿ ಹೇಳಬಹುದು. ನಿಡಿ-2 ದಾಖಲೆಯನ್ನು ಆರೋಪಿಯು ಈ ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ ದಾಖಲೆ ಎಂದರೆ ಸಾಕ್ಷಿಯು ಈ ಬಗ್ಗೆ ಬೆಳಗುತ್ತಿ ಶಾಖೆಯ ಬ್ಯಾಂಕ್ ನವರನ್ನು ಕೇಳಬೇಕು ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.